# ಅಧ್ಯಾತ್ಮದ ಮೇರುಗಿರಿ ಅಕ್ಕಮಹಾದೇವಿ

ಪ್ರೊ. ಶೈಲಜ

(ಹಿಂದಿನ ಸಂಚಿಕೆಯಿಂದ)

ಅದುವರೆಗೂ ಹಲವು ಶತಮಾನಗಳಿಂದ, ಹೆಣ್ಣು ಪ್ರವೇಶಿಸಿರದಿದ್ದ ಧಾರ್ಮಿಕ ಪ್ರಪಂಚಕ್ಕೆ, ಅಧ್ಯಾತ್ಮಲೋಕಕ್ಕೆ, ವೀರವಿರಾಗಿಣಿಯ ಮಾರ್ಗಕ್ಕೆ, ಸಾಹಿತ್ಯ ಕ್ಷೇತ್ರಕ್ಕೆ, ಚಿರಸ್ಮರಣೀಯ ಕೊಡುಗೆಯಿತ್ತ ಅಕ್ಕಮಹಾದೇವಿಯು ತನ್ನ ಅಭೂತಪೂರ್ವ ವ್ಯಕ್ತಿತ್ವದಿಂದ ಮೊಟ್ಟ ಮೊದಲ ಕ್ರಾಂತಿಕಾರಿಣಿ ಎಂಬ ಬಿರುದಿಗೆ ಪಾತ್ರಳಾದಳು; ಹಲವು ಪ್ರಥಮಗಳಿಗೆ ಭಾಜನಳಾದಳು.

ದೈವದ ಸ್ವರೂಪದ ಇರುವಿಕೆಯನ್ನು ಕುರಿತು ಅಕ್ಕ ಅನೇಕ ಸರಳವಾದ ಹೋಲಿಕೆಗಳನ್ನು ಕೊಡುವ ಮೂಲಕ ಅದು ಭಾವದ ಮರೆಯಲ್ಲಿ ಅಡಗಿದೆ ಎಂಬುದನ್ನು ಸೂಚಿಸುತ್ತಾಳೆ:

**ಫಲದ ಮರೆಯ ರುಚಿಯಂತೆ**
**ಶಿಲೆಯ ಮರೆಯ ಹೇಮದಂತೆ**
**ತಿಲದ ಮರೆಯ ತೈಲದಂತೆ**
**ಮರದ ಮರೆಯ ತೇಜದಂತೆ**
**ಭಾವದ ಮರೆಯ ಬ್ರಹ್ಮವಾಗಿಪ್ಪ**
**ಚನ್ನಮಲ್ಲಿಕಾರ್ಜುನನ ನಿಲವನರಿಯಲುಬಾರದು**

ಎಂದು ಹೇಳುತ್ತಾ ಮುಂದೆ ಆತನನ್ನು ಕಾಣಬೇಕಾದರೆ ಹಾಲಿನಿಂದ ತುಪ್ಪ ತೆಗೆದಂತೆ ಅದಕ್ಕಾಗಿ ಸತತ ಪ್ರಯತ್ನ, ಸಾಧನೆ ನಡೆಸಬೇಕು. ಜಗತ್ತನ್ನು ಸೃಷ್ಟಿಸಿಯೂ ಶಿವನು ಅದರ ಜಂಜಡದಲ್ಲಿ ಸಿಲುಕದ ಮಾಯಾತೀತನಾಗಿದ್ದಾನೆ; ಆದರೆ ಜಗದ ಜೀವಿಗಳು ಮಾಯಾಧೀನರು; ಆತನಾಡಿಸಿದಂತೆ ಆಡುವ ಸೂತ್ರದ ಗೊಂಬೆಗಳು; ತಮ್ಮನ್ನು ಬಗೆ ಬಗೆಯ ರೀತಿಯಲ್ಲಿ ಬೆಂಬತ್ತುವ ಮಾಯೆಯನ್ನು ಆ ದೈವದ ಕರುಣೆಯಿಂದಲೇ ಗೆಲ್ಲಬೇಕಾಗಿದೆ. ಅದಕ್ಕಾಗಿ ಅಕ್ಕ ಒಮ್ಮೊಮ್ಮೆ ಚನ್ನಮಲ್ಲಿಕಾರ್ಜುನನ ಮೊರೆಹೋದರೆ, ಮತ್ತೆ ಕೆಲವೊಮ್ಮೆ "ನಿನ್ನ ಮಾಯೆಗೆ ನಾನಂಜುವವಳಲ್ಲ" ಎಂಬ ಅಸದೃಶ ಧೈರ್ಯದಿಂದ ಅದನ್ನು ಎದುರಿಸಿ ಮೆಟ್ಟಿ ನಿಲ್ಲಲು ಸಿದ್ಧಳಾಗುತ್ತಾಳೆ. ಮನುಷ್ಯನ ದೇಹವನ್ನು ದಶೇಂದ್ರಿಯ ಸಪ್ತಧಾತು ಅಷ್ಟ ಮದ ಮಾಯೆಗಳು ನಾಶಪಡಿಸುತ್ತವೆ; ಅದರಿಂದ ಪಾರಾಗಬೇಕಾದರೆ ತಂತಮ್ಮ ಇಷ್ಟಲಿಂಗಗಳಿಗೆ ಶರಣರು ಮೊರೆಹೋಗಬೇಕು; ಚಂಚಲ ಮನಸ್ಸಿನವರಿಗೆ ದೇವರು ಒಲಿಯುವುದಿಲ್ಲ; ಅಚಲವಾದ ಶ್ರದ್ಧೆಯಿಂದ ಅಂಗದ ಮೇಲಿನ ಕರಸ್ಥಲದ ಲಿಂಗದಲ್ಲಿಯೇ ದೈವವನ್ನೂ, ತನ್ನನ್ನೂ ಕಾಣುವ ಸತತ ಹಂಬಲ ಆಕೆಯದಾಗಿರುತ್ತದೆ. ಬೆಂಬತ್ತುವ ಸಂಸಾರವನ್ನು ದಾಟಲು ದೈವಕೃಪೆಯೊಂದೇ ತಾರಕ ಮಂತ್ರ; **'ಕೊಲ್ಲುವುದು'** ಅಥವಾ **'ಕಾಯುವುದು'**– ಎಲ್ಲವೂ ದೈವದ ನಿಯಮವೆಂಬ ಅಚಲ ನಿಷ್ಠೆಯೊಂದಿಗೆ ದೈವಸಾಕ್ಷಾತ್ಕಾರದ ಸಾಧನೆಯಲ್ಲಿ ಆಕೆ ತೊಡಗುವವಳು; ಲೀಲಾಸ್ವರೂಪಿಯಾದ ಸಂಸಾರವ್ಯಾಮೋಹದಲ್ಲಿ ಸಿಲುಕಿ ದುಃಖಕ್ಕೀಡಾಗುವ ಜೀವವನ್ನು ಹಾಗೂ ಸೋರುವ ಮಾಳಿಗೆಯಂತಿರುವ ತನ್ನೀ ದೇಹವನ್ನು ಅದರ ಬಾಧೆಗಳಿಂದ ರಕ್ಷಿಸೆಂದು ಭಗವಂತನಲ್ಲಿ ಪ್ರಾರ್ಥಿಸುವವಳು.

ಜೀವಿಗಳಲ್ಲಿ ದೇವ ಅಣುವಾಗಿ ಇದ್ದೂ ಇಲ್ಲದಂತಿರುವನು; ತನ್ನ ವಿನೋದಕ್ಕೆ ತಾನೇ ಸೃಷ್ಟಿಸಿದ ಜಗತ್ತಿನ ಮಾಯಾಪಾಶವನ್ನು ಸಾಕಾದರೆ ತಾನೇ ಹರಿಯುವನು; ಜೀವಿಗಳಿಗೆಲ್ಲಾ ಆತನೇ ಆಶ್ರಯ ಶಕ್ತಿ; ಅದಕ್ಕಾಗಿ ಆತನನ್ನು ಬಿಡದೆ ಬೆಂಬತ್ತಿ ಪಡೆಯಬೇಕು. ಹೀಗಾಗಿ ಅಕ್ಕ ಮನಸ್ಸಿನ ದುರಾಸೆಯನ್ನು ಮಾಣಿಸಿ, ದೈವದತ್ತ ಒಲಿಯುವಂತೆ ಅನುಗ್ರಹಿಸಲು, ಆ ದೈವವನ್ನೇ ಪ್ರಾರ್ಥಿಸುವವಳು. ಹೊಲಸಿನ ಆಗರ ವಾಗಿರುವ ಈ ದೇಹವನ್ನಷ್ಟೇ ನೆಚ್ಚಿ ಕೆಡದೆ, ಮಾನವನಾಗಿ ಹುಟ್ಟಿದ ಬಳಿಕ ದೈವವನ್ನು ಅರಿತು ಬಾಳಬೇಕೆನ್ನುವವಳು. ದೃಢ ವಿಲ್ಲದ ಒಡಲನ್ನು, ಸಂಸಾರಸುಖವನ್ನು ಹಿಡಿದೂ ಅದು ನಾಶ ವಾಗುವ ಮುನ್ನವೇ ದೈವದ ಮೊರೆಹೋಗಬೇಕು; ದೈವದ ಕರುಣೆ ಪಡೆಯಬೇಕು; ದೈವದಿಂದ ದೂರವಾಗಿ ಕಳವಳಿಸುವ ಜೀವಕ್ಕೆ ದೈವದ ಆಸರೆ ಬೇಕು; ಮನಸ್ಸು ದೈವದಲ್ಲಿ ಲೀನವಾದರೆ ಭವವಿಲ್ಲ; ಇದಕ್ಕೆ ಸಹಾಯಕವಾಗುವಂತೆ ಶ್ರೀಗುರುವಿನ ಹಸ್ತ ಮಸ್ತಕ ಸಂಯೋಗದಿಂದ ತನಗೆ ಇಷ್ಟಲಿಂಗದೀಕ್ಷೆ ದೊರೆತಾಗ, ಶ್ರೀಗುರುವಿನುಪದೇಶದಿಂದ ತನ್ನ ಹಿಂದಣ ಮುಂದಣ ಜನ್ಮಗಳು ನಾಶವಾಗಿ, ಈಗಿನ ನರ ಜನ್ಮವೂ ನಾಶವಾಗಿ ತನಗೆ ಹರಜನ್ಮವಾಯಿತೆಂದು ಹೇಳುವವಳು. ಹೀಗೆ ಇಷ್ಟಲಿಂಗದೀಕ್ಷೆಯಿಂದ ಸಂಸಾರದ ನಿಸ್ಸಾರತೆಯನ್ನು ಅರಿತು, ಅಂಗವಿಕಾರ ಕಳೆದುಕೊಂಡು ಲಿಂಗಶರೀರಿಯಾಗುವವಳು; ಲಿಂಗಾಂಗ ಸಾಮರಸ್ಯದ ಸಾಧಕಳಾಗುವವಳು.

ಸಾಧನೆಯ ರಂಗದಲ್ಲಿ ದೈವವು ಆಕೆಯನ್ನು ಬಗೆಬಗೆಯಾಗಿ ಕಾಡುವುದು; ಅದಕ್ಕೆ ಧೃತಿಗೆಡದೆ ಅದೇ ದೈವವನ್ನೇ ಪರಿಪರಿಯಾಗಿ ಆಕೆ ಮೊರೆಹೋಗುವವಳು. ತನಗೆ ದೈವದ ಸಂಪರ್ಕ ಕಲ್ಪಿಸಿದ ಶ್ರೀಗುರುವಿಗೆ ಮೊದಲಿಗೆ ಧನ್ಯತೆಯಿಂದ ಬಗೆಬಗೆಯಾಗಿ ನಮಿಸಿ, ಅನಂತರ ದೈವದೊಂದಿಗಿನ ತನ್ನ **'ಶರಣಸತಿ ಲಿಂಗಪತಿ'** ಎಂಬ ಭಾವವನ್ನು ಕುರಿತು ಅನೇಕ ವಚನಗಳಲ್ಲಿ ಅವಳು ಪರಿಪರಿಯಾಗಿ ಹೇಳಿಕೊಂಡಿದ್ದಾಳೆ. ತನಗೂ ಚನ್ನಮಲ್ಲಿಕಾರ್ಜುನನಿಗೂ ವಿವಾಹ ವಾದುದನ್ನು ಬಗೆಬಗೆಯಾಗಿ ಬಣ್ಣಿಸಿದ್ದಾಳೆ:

**ಗುರುಪಾದ ತೀರ್ಥವೆ ಮಂಗಳ ಮಜ್ಜನವೆನಗೆ, ಹರನೆ ನೀನೆನಗೆ ಗಂಡನಾಗಬೇಕೆಂದು ಅನಂತಕಾಲ ತಪಿಸಿದ್ದೆ ನೋಡಾ, ಜಲದ**

**ಮಂಟಪದ ಮೇಲೆ ಉರಿಯ ಚಪ್ಪರವನಿಕ್ಕಿ, ಪಚ್ಚೆಯ ನೆಲೆಗಟ್ಟು ಕನಕದ ತೋರಣ ವಜ್ರದ ಕಂಭ .............ಚನ್ನಮಲ್ಲಿಕಾರ್ಜುನನೆಂಬ ಗಂಡಂಗೆ ಎನ್ನ ಮದುವೆಯ ಮಾಡಿದರು**

ಚನ್ನಮಲ್ಲಿಕಾರ್ಜುನ ದೇವರೇ ತನ್ನ ಕರಸ್ಥಲಕ್ಕೆ ಚುಳುಕಾಗಿ ಬಂದುದಕ್ಕೆ ಅಕ್ಕ ಸಂಭ್ರಮಿಸಿ ಲಿಂಗರೂಪದ ಪತಿಯನ್ನು ಬಗೆಬಗೆಯಾಗಿ ಪೂಜಿಸಿ ತನ್ನ ಭವವನ್ನು ಇಲ್ಲವಾಗಿಸುವ ಸಾಧನೆಯಲ್ಲಿ ಮುಂದುವರಿಯುವವಳು; ದೇವನಲ್ಲಿ ಬಿಚ್ಚಿ ಬೇರಾಗದ ನಿತ್ಯಸುಖಕ್ಕಾಗಿ  ಹಂಬಲಿಸುವವಳು; ಅದನ್ನು ವಿಭೂತಿ ರುದ್ರಾಕ್ಷಿ ಮಂತ್ರಗಳ ಪೂಜೆಯಿಂದ, ಜಂಗಮಲಿಂಗದ ಸೇವೆಯಿಂದ, ಪಾದೋದಕ ಪ್ರಸಾದಗಳಿಂದ, ಉಪಮಾತೀತ ರುದ್ರಗಣಗಳಿಂದ, ಶರಣರ ಸಂಗಗಳಿಂದ ಪಡೆಯಲು ಪ್ರಯತ್ನಿಸುವವಳು. ಆ ಸುಖ ನೀಡುವ ಘನವಸ್ತು ತನ್ನಲ್ಲೇ ಇರುವುದನ್ನು ಕ್ರಮೇಣ ಅರಿಯುವವಳು. ಆಗ ಅನವರತವೂ ತನ್ನ ಮನದೊಳಗಿನ ಚನ್ನಮಲ್ಲಿಕಾರ್ಜುನನ ಚಿಂತೆಯಲ್ಲಿಯೇ ಧ್ಯಾನಲೀನಳಾಗುವವಳು. ಅದರ ಸಾಕ್ಷಾತ್ಕಾರಕ್ಕಾಗಿ ಸದ್ಭಕ್ತರ ಸಂಗದಲ್ಲಿ, ಸತ್ಯಶರಣರ ಅನುಭಾವದಲ್ಲಿ ಹಾಗೂ ಮಹಾನುಭಾವಿಗಳ ಸದ್ಗೋಷ್ಠಿಗಳಲ್ಲಿ ಪಾಲ್ಗೊಳ್ಳುವವಳು. ಅದರಿಂದ ಆಕೆ ದೈವಕ್ಕೇ ತೊಡಿಗೆಯಾಗುವವಳು. ತನ್ನ ಭಕ್ತಿಸಾಧನೆಗೆ ಅಡ್ಡಿಬಂದವರನ್ನೆಲ್ಲಾ ಪರಿಪರಿಯಾಗಿ **"ಎಲೆ ಅಣ್ಣಗಳಿರಾ ಎಲೆ ತಂದೆಗಳಿರಾ ಎನ್ನನೇಕೆ ನುಡಿಸುವಿರಿ"** ಎಂದು ಪ್ರಶ್ನಿಸುತ್ತಾ ಮುಂದುವರಿಯುವವಳು. ಆಡಂಬರದ ಭಕ್ತಿಯಿಂದ ಭವಬಂಧನ ತಪ್ಪುವುದಿಲ್ಲವೆಂದರಿತು, ಪುರಾತನ ಶರಣರಿಗೆ ಶರಣೆನ್ನುತ್ತಾ ಲಿಂಗಸುಖಿಗಳ ಸಂಗದಲ್ಲಿ ಕಾಲ ಕಳೆಯುತ್ತಾ, ಗುರು ಲಿಂಗ ಜಂಗಮರನ್ನು ಪೂಜಿಸುತ್ತ, ಲೋಕವೇ ತಾನಾದ ಬಳಿಕ ಏಕಾಂತದ ಹಂಗಿಲ್ಲದಂತೆ ತನ್ನ ಅಂತರಂಗ ಬಹಿರಂಗಗಳೆರಡೂ ಚನ್ನಮಲ್ಲಿಕಾರ್ಜುನನೆಂಬ ಲಿಂಗಕ್ಕಾಗಿಯೇ ಮೀಸಲಾಗಿ ಬದುಕು ನಡೆಸಿದಳು. ಅಧ್ಯಾತ್ಮ ಸಾಧಕರ ಪರಿ ಎಲ್ಲರಂತಲ್ಲ; **"ದೇವನೊಲಿದವರು ಕಾಯಗೊಂಡಿದ್ದರೆನ್ನಬೇಡ"** ಎಂಬ ಉಕ್ತಿಯಂತೆ  ಅವರು ಮರಣವನ್ನು ಗೆದ್ದ ಮಹಾಂತರು; ದೇಹಧಾರಿಗಳಾಗಿದ್ದರೂ ದೇಹದ ವಿಕಾರಗಳನ್ನು ಗೆದ್ದವರು. ಅದಕ್ಕಾಗಿ ಸತತವಾಗಿ ಸಾಧನೆಗಳನ್ನು ಮಾಡಬೇಕು. ಅಕ್ಕನು ತನ್ನ ಸತತವಾದ ಸಾಧನೆಯಿಂದ ಲಿಂಗದ ಭಂಗವನ್ನು ಲಿಂಗಮುಖದಿಂದ, ಮನದ ಭಂಗವನ್ನು ಅರುಹಿನ ಮುಖದಿಂದ, ಜೀವದ ಭಂಗವನ್ನು ಶಿವಾನುಭವದಿಂದ, ಕರಣದ ಕತ್ತಲೆಯನ್ನು ಬೆಳಗನ್ನುಡುವುದರಿಂದ ಗೆದ್ದುದಾಗಿ ಹೇಳುತ್ತಾ, ಜವ್ವನದ ಹೊರಮಿಂಚಿನಲ್ಲಿ ತೋರುವ ಕಾಮನ ಸುಟ್ಟುರುಹಿದ ಭಸ್ಮವ ನೋಡಿ, "ಅಂದು ಶಿವ ಕಾಮನನ್ನು ಕೊಂದು ಮನಸಿಜನಾಗಿ ಉಳಿಸಿದ್ದರೆ ಇಂದು ನಾನು ಆತನ ಬರಹವನ್ನೇ ತೊಡೆದು ಹಾಕಿದ್ದೇನೆ" ಎನ್ನುವವಳು. ಆಕೆಯ ಸಾಧನಾಪಥದಲ್ಲಿ ಎದುರಾದ ಸಂಕಷ್ಟಗಳನ್ನೆಲ್ಲಾ ಅತ್ಯಂತ ಧೈರ್ಯದಿಂದ ಎದುರಿಸಿದಳೆಂಬುದಕ್ಕೆ ಆಕೆಯ **'ಆರೂ ಇಲ್ಲದವಳೆಂದು ಅಳಿಗೊಳಲುಬೇಡ ಕಂಡೆಯಾ'** ಎಂದು ಆರಂಭವಾಗುವ ವಚನದ ಕೊನೆಯ ಮಾತಾದ, **'ಕರಕೇಡ ನೊಡ್ಡಿದೊಡೆ ಒಡಲನು ಪ್ರಾಣವನು ನಿಮಗರ್ಪಿಸಿ ಶುದ್ಧಳಹೆನು'** ಎಂಬ ನುಡಿಯೇ ಸಾಕ್ಷಿಯಾಗಿದೆ. **'ಅಯ್ಯಾ, ನೀ ಕೇಳಿದಡೆ ಕೇಳು ಕೇಳದಿದ್ದಡೆ ಮಾಣು, ಆನು ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯಾ'** ಎಂಬ ಮಟ್ಟಕ್ಕೆ ಆಕೆಯ ಭಕ್ತಿ ಬೆಳೆದಿದೆ. ಭಕ್ತಿ ಸಾಧನೆಯಲ್ಲಿ ಅಕ್ಕ ದಿನದಿಂದ ದಿನಕ್ಕೆ ಪರಿಣತಳಾಗುತ್ತಾ ಹೋದಳು. ನಿಜವಿಲ್ಲದ ಭಕ್ತಿ, ದೈವದ ಜ್ಞಾನವಿಲ್ಲದ ಬದುಕು ವ್ಯರ್ಥ; **'ತನುವೆಲ್ಲವ ಜರಿದು ಮನವ ನಿಮ್ಮೊಳಗಿರಿಸಿ ಘನಸುಖವ ಲೋಲಾಡುವ ಪರಿಯ ತೋರಯ್ಯಾ ಎನಗೆ ........ನಾನಳಿದು ನೀನುಳಿದ ಪರಿಯ ತೋರಯ್ಯಾ ಪ್ರಭುವೆ'** ಎನ್ನುವವಳು. ತನ್ನ ಸಾಧನೆಯ ಬದುಕಿನಲ್ಲಿ ಎದುರಾದ ಜನರನ್ನು ಹಾಗೂ ಅನಿಮಿತ್ತ ದೈಹಿಕ ಬಾಧೆಗಳನ್ನೆಲ್ಲಾ, **"ನಿಲ್ಲು ನಿಲ್ಲು ತಾನು ಚನ್ನಮಲ್ಲಿಕಾರ್ಜುನ ದೇವರ ಅವಸರದ ಓಲೆಯನೊಯ್ಯುತ್ತಲಿದ್ದೇನೆ, ಶರಣಾರ್ಥಿ"** ಎನ್ನುವ ಮೂಲಕ ಗೆಲ್ಲುವ ಪ್ರಯತ್ನ ಮಾಡಿದ್ದಾಳೆ. ಸಾಧನೆಯಲ್ಲಿ ಅಕ್ಕ ದೈವಕ್ಕೆ ತನ್ನನ್ನು ಸರ್ವಾರ್ಪಣಾಭಾವದಿಂದ ಅರ್ಪಿಸಿಕೊಂಡಿದ್ದಾಳೆ.

**ಕಿಡಿ ಕಿಡಿ ಕೆದರಿದಡೆ ಎನಗೆ ಹಸಿವು ತೃಷೆ ಅಡಗಿತ್ತೆಂಬೆನು**
**ಮುಗಿಲು ಹರಿದು ಬಿದ್ದಡೆ ಎನಗೆ ಮಜ್ಜನಕ್ಕೆರೆದೆನೆಂಬೆನು**
**ಗಿರಿ ಮೇಲೆ ಬಿದ್ದಡೆ ಎನಗೆ ಪುಷ್ಪವೆಂಬೆನು**
**ಚನ್ನಮಲ್ಲಿಕಾರ್ಜುನಯ್ಯಾ**
**ಶಿರ ಹರಿದು ಬಿದ್ದಡೆ ಪ್ರಾಣ ನಿಮಗರ್ಪಿತವೆಂಬೆನು**

ಎಂಬ ಸರ್ವಾರ್ಪಣ ಅಚಲಭಕ್ತಿ ಅವಳದು. ಆ ನಿಜಭಕ್ತಿ ಮಾರಾಟದ ಸರಕಲ್ಲವೆನ್ನುವವಳು. ವೇಷಧಾರಿಗಳನ್ನು, ಕಪಟಿಗಳನ್ನು ಹಗಲುಗಳ್ಳರನ್ನು ದೈವ ಮೆಚ್ಚುವುದಿಲ್ಲ; ದೃಢಭಕ್ತರಿಗೆ ಸ್ಥಿತಪ್ರಜ್ಞರಿಗೆ ದೇವನೊಲಿಯುವವನು. 'ಅವನೊಲುಮೆ ಇರುವಾಗ ನಾಳೆ ಬರುವುದು ನಮಗಿಂದೇ ಬರಲಿ, ಇಂದು ಬರುವುದು ಈಗಲೇ ಬರಲಿ' ಎನ್ನುತ್ತಾಳೆ. ಅಕ್ಕ ಗಂಡುಗಚ್ಚೆಯ ಹಾಕಿ ಗಂಡುಡುಗೆಯನ್ನುಟ್ಟು ಚನ್ನಮಲ್ಲಿಕಾರ್ಜುನನಿಗೆ ಯೋಗ್ಯಳಾಗಿ ಬದುಕುವವಳು. ಕರಸ್ಥಲದಲ್ಲಿ ಚನ್ನಮಲ್ಲಿಕಾರ್ಜುನ ಇರುವಾಗ ಉಳಿದವರ ಹಂಗು ತನಗಿಲ್ಲವೆನ್ನುವವಳು.

ಚನ್ನಮಲ್ಲಿಕಾರ್ಜುನನ ಘನವನ್ನರಿಯಲು ಘನಸಾಧನೆಯೇ ಬೇಕು. ಶರಣನಾದವನು ಸತ್ಯಮಾರ್ಗದಲ್ಲಿ ಗುರು ಲಿಂಗ ಜಂಗಮರನ್ನು ಸೇವಿಸಬೇಕು. ಆತ್ಮಸಂಗಾತಕ್ಕೆ ಚನ್ನಮಲ್ಲಿಕಾರ್ಜುನನು ಇರುವಾಗ ಬೇರಾವುದಕ್ಕೂ ಚಿಂತಿಸದ ಅಕ್ಕ ತನ್ನನ್ನು ಬಗೆಬಗೆಯಾಗಿ ಪ್ರಶ್ನಿಸುವವರಿಗೆ ದಿಟ್ಟತನದ ಉತ್ತರವನ್ನು ನೀಡುವವಳು.  ಚನ್ನಮಲ್ಲಿಕಾರ್ಜುನನೊಲಿದ ಕಾಯ ಹೇಗಿದ್ದರೇನೆನ್ನುವವಳು; ಯಾವ ವಿದ್ಯೆಯನ್ನು ಕಲಿತರೂ ಸಾವಿನಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ; ಅದಕ್ಕೆ ಭಕ್ತಿಮಾರ್ಗ ಒಂದೇ ದಾರಿ; ಅದಕ್ಕೆ ಇಷ್ಟಲಿಂಗಪೂಜೆಯೊಂದೇ ಮಾರ್ಗ; ನಡೆನುಡಿಗಳೊಂದಾಗಿ ಕಾಯಕ ಜೀವಿಗಳಾಗಿ ಗುರುಲಿಂಗ ಜಂಗಮಗಳ ಪೂಜೆಯಿಂದ ಭವಾದಿಗಳು ನಾಶವಾಗುವುವು; ಅರ್ಚನ ಅರ್ಪಣ ಅನುಭಾವಗಳಿಂದ ಭಕ್ತಿ ಜ್ಞಾನ ಅನ್ಯೋನ್ಯವಾಗಿ, ತನು ಮನ ಕರಗಿ,  ಅರಿವು ಕಣ್ದೆರೆದು ಭಾವಶುದ್ಧರಾಗಿ ಅರಳಿದ ಹೃದಯ ಕಮಲದಿಂದ ಪೂಜಿಸುವವರಿಗೆ ದೈವಸಾಕ್ಷಾತ್ಕಾರವಾಗುವುದು.

ಲೋಕದವರ ನೂರೆಂಟು ಟೀಕೆಗಳಿಗೆ ಅಕ್ಕ ಹೀಗೆ ಸಂತೈಸಿಕೊಂಡು ಮುನ್ನಡೆವ ದೃಢಸಂಕಲ್ಪ ಹೊಂದಿದ್ದಳು:

**ಹೆದರದಿರು ಮನವೆ ಬೆದರದಿರು ತನುವೆ**
**ನಿಜವನರಿತು ನಿಶ್ಚಿಂತನಾಗಿರು**
**ಫಲವಾದ ಮರನ ಕಲ್ಲಲಿ ಇಡುವುದೊಂದು ಕೋಟಿ**
**ಎಲವದ ಮರನ ಇಡುವನೊಬ್ಬರ ಕಾಣೆ**
**ಭಕ್ತಿಯುಳ್ಳವರ ಬೈವರೊಂದು ಕೋಟಿ**
**ಭಕ್ತಿಯಿಲ್ಲದವರ ಬೈವರೊಬ್ಬರ ಕಾಣೆ**
**ನಿಮ್ಮ ಶರಣರ ನುಡಿಯೆ ಎನಗೆ ಗತಿ, ಸೋಪಾನ**
**ಚನ್ನಮಲ್ಲಿಕಾರ್ಜುನ**

ಎನ್ನುವಳು. ತನ್ನ ಮನಸ್ಸು ಚನ್ನಮಲ್ಲಿಕಾರ್ಜುನನಿಗಲ್ಲದೆ ಅನ್ಯಕ್ಕೆ ಎಳಸುವುದಿಲ್ಲ ಎಂಬುದನ್ನು ಬಗೆಬಗೆಯಾಗಿ ಹೇಳಿದ್ದಾಳೆ.

ಮುಂದೆ ಯೋಗಮಾರ್ಗದಲ್ಲಿ ಅಕ್ಕ ತನ್ನ ಸಾಧನೆಯನ್ನು ಮುಂದುವರಿಸಿ, ಶಿವಯೋಗದ ಮೂಲಕ ಲಿಂಗಾಂಗಸಾಮರಸ್ಯ ಸಾಧಿಸುವ ಕಡೆ ಮುನ್ನಡೆಯುವಳು. ಅದಕ್ಕೆ ವೇದಶಾಸ್ತ್ರಾಗಮ ಪುರಾಣಗಳಿಂದ **'ಅತ್ತಲಿತ್ತ ಹರಿವ ಮನವ ಶಿರವನರಿದಡೆ ಚನ್ನಮಲ್ಲಿಕಾರ್ಜುನನ ನಿಲವು ಬಚ್ಚಬರಿಯ ಬಯಲು'** ಎನ್ನುತ್ತಾಳೆ. ಇಷ್ಟಲಿಂಗವನ್ನು ಆಯತ ಮಾಡಿಕೊಂಡು, ಪ್ರಾಣಲಿಂಗವನ್ನು ಸ್ವಾಯತ್ತೀಕರಿಸಿ, ಭಾವಲಿಂಗದ ಸಾನ್ನಿಧ್ಯದಲ್ಲಿ ಒಂದಾದ ಅಕ್ಕನ ತನು ಲಿಂಗಸ್ವರೂಪವೇ ಆಯಿತು. ಹಾಲು ಹಾಲಿನಲ್ಲಿ ಬೆರೆತ ಬಳಿಕ ಬೇರೆ ಮಾಡಲಾಗದಂತೆ ಜೀವ ಪರಮಾತ್ಮನಲ್ಲಿ ಬೆರೆತ ಮೇಲೆ ಪರಮಾತ್ಮನ ಧ್ಯಾನವೇ ಅವಳ ಬದುಕಾಯಿತು. ಸ್ಥೂಲತನುವಿಗೂ ಮನಸ್ಸಿಗೂ ಮೀರಿದ ಆ ಸಮರಸವು ಅವಳಲ್ಲಿ ಅಭಿನ್ನವಾಯಿತು. ಬಹಿರ್ದೃಷ್ಟಿ ಅಡಗಿ ಲಿಂಗದೃಷ್ಟಿ ಬೆಳೆಯಿತು. ಆಗ ತುಂಬಿದುದು ತುಳಕದಂತೆ, ನಂಬಿದುದು ಸಂದೇಹಿಸದಂತೆ, ಒಲಿದುದು ಓಸರಿಸದಂತೆ, ನೆರೆಯದಿದುದು ಮರೆಯದಂತೆ ನಿಸ್ಸೀಮ ಸುಖದಲ್ಲಿ ಅಕ್ಕ ಓಲಾಡಿದಳು; ಭಿನ್ನತೆಯಡಗಿ ಏಕೀಭವಿಸಿದಳು. ಅದನ್ನು **"ನಾನು ನಿನಗೊಲಿದೆ, ನೀನು ಎನಗೊಲಿದೆ, ನೀನೆನ್ನನಗಲದಿಪ್ಪೆ, ನಾನಿನ್ನನಗಲದಿಪ್ಪೆನಯ್ಯಾ, ನಿನಗೆ ಎನಗೆ ಬೇರೊಂದು ಠಾವುಂಟೆ"** ಎಂಬುದಾಗಿ ಹೇಳಿದ್ದಾಳೆ.

ತನ್ನ ಭಕ್ತಿಯ ಸಾಧನಾ ಬದುಕಿನ ಪಥವನ್ನು ಅಕ್ಕ ಹೀಗೆ ಸುಂದರವಾಗಿ ವಿವರಿಸಿದ್ದಾಳೆ:

**ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಿಂಗೆ ನಾನೊಲಿದೆ**
**ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ**
**ಚೆಲುವಂಗೆ ನಾನೊಲಿದೆ, ಎಲೆ ಅವ್ವಗಳಿರಾ**
**ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ ನಾನು**
**ಸೀಮೆಯಿಲ್ಲದ ನಿಸ್ಸೀಮಂಗೊಲಿದೆ ನಾನು**
**ಚನ್ನಮಲ್ಲಿಕಾರ್ಜುನನೆಂಬ ಗಂಡಂಗೆ**
**ಮಿಗೆ ಮಿಗೆ ಒಲಿದೆ ಎಲೆ ಅವ್ವಗಳಿರಾ!**

ಚನ್ನಮಲ್ಲಿಕಾರ್ಜುನನ ಒಲುಮೆಗಾಗಿ, ಸಾಕ್ಷಾತ್ಕಾರಕ್ಕಾಗಿ ಅಕ್ಕ ಪಟ್ಟ ಬವಣೆಗಳ ವಿವರಗಳು ಆಕೆಯ ವಚನಗಳಲ್ಲಿ ಸಾಕಷ್ಟು ದೊರಕುತ್ತವೆ: **"ಬಂದಹನೆಂದು ಬಟ್ಟೆಯ ನೋಡಿ ಬಾರದಿದ್ದಡೆ ಕರಗಿ ಕೊರಗಿದೆನವ್ವಾ; ತಡವಾದಡೆ ಬಡವಾದೆ ತಾಯೆ"** ಎಂದೊಮ್ಮೆ ಹೇಳಿದರೆ, ಮಗದೊಮ್ಮೆ **"ಕಳವಳದ ಮನ ತಲೆಕೆಳಗಾದುದವ್ವಾ, ಸುಳಿದು ಬೀಸುವ ಗಾಳಿ ಉರಿಯಾದುದವ್ವಾ, ಬೆಳದಿಂಗಳು ಬಿಸಿಯಾಯಿತ್ತು ಕೆಳದಿ"** ಎನ್ನುವಳು, ಚನ್ನಮಲ್ಲಿಕಾರ್ಜುನನ ಕುರುಹನ್ನು ಹೀಗೆ ವರ್ಣಿಸುತ್ತಾಳೆ: **"ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು, ಹೊಳೆವ ಕೆಂಜೆಡೆಯ ಮೇಲೆ ಎಳೆವೆಳುದಿಂಗಳು ಫಣಿಮಣಿ ಕರ್ಣಕುಂಡಲ ನೋಡವ್ವಾ, ರುಂಡಮಾಲೆಯ ಕೊರಳವನ ಕಂಡಡೆ ಒಮ್ಮೆ ಬರಹೇಳವ್ವಾ"** ಎನ್ನುವಳು. **"ನೀನಾವಾಗ ಬಂದೆಯಾ"** ಎಂದು ಕಾಯುವಳು. ಕಂಡ ಕಂಡ ಅಳಿಸಂಕುಳವನ್ನು, ಗಾಳಿ ಕೋಗಿಲೆ ಹಂಸೆ ನವಿಲುಗಳನ್ನು, ಮಾಮರ ಬೆಳದಿಂಗಳುಗಳನ್ನು, **"ಚನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿರೆ"** ಎನ್ನುವಳು. **"ಚನ್ನಮಲ್ಲಿಕಾರ್ಜುನನಲ್ಲದೆ ಮಿಕ್ಕಿಹ ಪುರುಷರೆನಗೆ ಸಹೋದರರು , ಛೀ ಹೋಗಾ ಮರುಳೆ, ಚನ್ನಮಲ್ಲಿಕಾರ್ಜುನನಲ್ಲದ ಮಿಕ್ಕಿನ ಪುರುಷನು ನಮಗಾಗದ ಮೋರೆ ನೋಡಣ್ಣಾ"** ಎಂಬ ನಿಷ್ಠೆ ಅವಳದು. ಆತನ ಒಲುಮೆ ನೆಟ್ಟು ಅಕ್ಕ ಹಸಿವು ತೃಷೆ ನಿದ್ರೆಗಳನ್ನು ತೊರೆದಳು. ಆತ ಬಂದಹನೆಂದು ಬಟ್ಟೆಯ ನೋಡಿ ಬಾಯಾರುತ್ತಿದ್ದಳು. ಕನಸಿನಲ್ಲಿ ಮನ ಸಂಗವಾಗಿ ಮೈಮರೆದು, ಮನಸ್ಸಿನಲ್ಲಿ ಮೈಮರೆದು ಬರಗಲು ಚನ್ನಮಲ್ಲಿಕಾರ್ಜುನನನ್ನು ಕಂಡು ಕಣ್ದೆರೆಯುವಳು. ಕಾಣುತ್ತ ಕಾಣುತ್ತ ಕಂಗಳ ಮುಚ್ಚಿದಳು; ಆತನ ಕೂಟದ ಪರಮಸುಖವನ್ನು ಅನುಭವಿಸಿದಳು; **"ಎನ್ನ ದೇವ ಚನ್ನಮಲ್ಲಿಕಾರ್ಜುನನೆಂಬ ಗರುವಂಗೆ ಜಗವೆಲ್ಲ ಹೆಣ್ಣು ನೋಡಾ"** ಎನ್ನುವಳು. ಆ ಸಮರಸದ ಲಿಂಗೈಕ್ಯದ ಅನುವ ಲಿಂಗೈಕ್ಯರೇ ಬಲ್ಲರೆಂದು, ಅಂತಹ ಮಹಾಮಹಿಮರನ್ನು ತಾನಗಲಿರಲಾರೆನೆಂದು, ತನ್ನೊಡೆಯನನ್ನು ಕಾಣದೆ ತಾನು ಬದುಕಿರಲಾರೆನೆಂದು ಹೇಳುವಳು. ಹೀಗೆ ತನ್ನ ಸಾಧನೆಯಿಂದ ಒಡಲಿಲ್ಲದ ನುಡಿಯಿಲ್ಲದ ಕಡೆಯಿಲ್ಲದ ನಲ್ಲನ ಒಡಗೂಡಿ ತಾನು ಸುಖಿಯಾದೆನೆಂದಿದ್ದಾಳೆ. ಫಲವಾಗಿ ಆಕೆಯ ಮನಸ್ಸು ಹಾಗೂ ಪಂಚೇಂದ್ರಿಯಗಳೆಲ್ಲವೂ ಆತನಲ್ಲಿ ನಚ್ಚಿ ಮೆಚ್ಚಿ ಸಲುಗೆ ತೋರಿ ಸೋತು ಅಳಲುಗೊಂಡು ಬಳಲಿ ಕರಗಿ ಕೊರಗಿ ಬೆರೆತುಹೋದುವು. ಹೀಗೆ ಚನ್ನಮಲ್ಲಿಕಾರ್ಜುನಯ್ಯನೊಳಗೆ ಆಕೆ ಅಳಿದು, ಲಿಂಗವೆಂಬ ಘನವು ಮಾತ್ರ ಆಕೆಯಲ್ಲಿ ಉಳಿದು ಎರಡೂ ಸಮರಸಗೊಂಡವು. ಆಗ ಹೇಳುವುದೇನೂ ಉಳಿಯಲಿಲ್ಲವೆನ್ನುವಳು.

ಹೀಗೆ ಅಕ್ಕಮಹಾದೇವಿ ಭಗವಂತನ ಸಾಕ್ಷಾತ್ಕಾರದ ಸುಖವನ್ನು ಅನೇಕ ಮಾತುಗಳಲ್ಲಿ ಹಿಡಿದಿಡುವ ಮೂಲಕ ಕನ್ನಡದ ಆಧ್ಯಾತ್ಮಿಕ ಸಾಹಿತ್ಯಸಂಪತ್ತನ್ನು ಮುಗಿಲೆತ್ತರಕ್ಕೇರಿಸಿದ್ದಾಳೆ. ಲಿಂಗಾಂಗ ಸಾಮರಸ್ಯದ ಸುಖದಿಂದ ಸಂದಳಿದು ಸ್ವಯಂಲಿಂಗವಾದುದನ್ನು ಹೇಳಿದ್ದಾಳೆ. ಕಲ್ಯಾಣಕ್ಕೆ ಹೋಗಿ ಅಲ್ಲಮರ ಬಗೆಬಗೆಯ ಪರೀಕ್ಷೆಗೊಳಗಾಗಿ ಬಸವಾದಿ ಶರಣರೊಡನೆ ಕಲೆತು, ಅನುಭಾವಿಗಳ ಸಂಗದಲ್ಲಿ ಪುಟಕ್ಕಿಟ್ಟ ಚಿನ್ನದಂತಾಗಿ, ಅಲ್ಲಮರ ಮಾರ್ಗದರ್ಶನದಂತೆ ತನ್ನ ಬದುಕಿನ ಅಂತಿಮ ಗಳಿಗೆಗಾಗಿ ಶ್ರೀಶೈಲದ ಕದಳಿಬನಕ್ಕೆ ನಡೆದು, ಚನ್ನಮಲ್ಲಿಕಾರ್ಜುನನ ಹೃದಯಕಮಲದಲ್ಲಿ ಅಡಗಿಹೋಗುವಳು. ಹೀಗೆ ಅಧ್ಯಾತ್ಮ ಸಾಧನೆಯಲ್ಲಿ ಮಹಾದೇವಿಯಕ್ಕ ಮೇರುಗಿರಿಯೆನಿಸಿ ಎಂದೆಂದಿಗೂ ಚಿರಂತನವಾಗಿದ್ದಾಳೆ.